KACM030026812022

<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,</u>
<u>ಚಿಕ್ಕಮಗಳೂರು.</u>

ಉಪಸ್ಥಿತರುಃ ಅನುರಾಧ ಹೆಚ್.ಟಿ. ಎಂ.ಎ. ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಚಿಕ್ಕಮಗಳೂರು.

**<u>ಸಿ.ಸಿ. ನಂ.1723/2022</u>**

ದಿನಾಂಕಃ **22** ನೇ ನವೆಂಬರ್ **2025**

ಫಿರ್ಯಾದುದಾರರು ಃ ರಾಜ್ಯದ ಪರವಾಗಿ ಸಿ.ಐ ಡಿ ಪೋಲೀಸ್,
ಅರಣ್ಯ ಸಂಚಾರಿ ದಳ, ಚಿಕ್ಕಮಗಳೂರು.

(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

**- ವಿರುದ್ಧ -**

ಆರೋಪಿ/ತರು ಃ

**1.** ಕೃಷ್ಣಯ್ಯ ಬಿನ್ ಲೇಟ್ ರಾಮಯ್ಯ ಪ್ರಾಯ ಸುಮಾರು **50** ವರ್ಷಗಳು, ವಾಸಃ ಮದ್ದೇಹಳ್ಳಿ ಗ್ರಾಮ ಕುಪ್ಪಾಳು ಅಂಚೆ ತಿಪಟೂರು ತಾಲೂಕು, ತುಮಕೂರು ಜಿಲ್ಲೆ.

**2.** ರಾಜು ಟಿ.ಎನ್. ಬಿನ್ ಲೇಟ್ ನಿರ್ವಾಣಪ್ಪ,ಪ್ರಾಯ ಸುಮಾರು **46** ವರ್ಷ, ಕೃಷಿಕರು, ವಾಸಃ ನೀರುಗಂಡಿ ಮಠ, ನಿಡಘಟ್ಟ ಅಂಚೆ, ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ.

(ಪ್ರತಿನಿಧಿಸುವವರುಃ ಶ್ರೀ. ಕೆ.ಎಸ್.ಶರತ್ ಚಂದ್ರ, ವಕೀಲರು)

-ಃ <u>ತೀ ರ್ಪು</u> ಃ-

ಚಿಕ್ಕಮಗಳೂರು ಸಿ.ಐ ಡಿ ಪೋಲೀಸ್, ಅರಣ್ಯ ಸಂಚಾರಿ ದಳ, ಆರಕ್ಷಕ ಉಪ ನಿರೀಕ್ಷಕರು, 1 ಮತ್ತು 2 ನೇ ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿ ಆರೋಪಿತರು

ವನ್ಯ ಜೀವಿ (ಸಂರಕ್ಷಣಾ) 1972 ರ ಕಾಯ್ದೆ ಕಲಂ 9, 39, 40 44 ಹಾಗೂ 48(ಎ) ಸಹವಾಚಕ ಕಲಂ 50, 51, ಹಾಗೂ 55 ರ ಅಡಿಯಲ್ಲಿ ಕೃತ್ಯವೆಸಗಿದ್ದಾರೆಂದು ಆರೋಪಿಸಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನಂದರೆ:-

ದಿನಾಂಕ 13.04.2022 ರಂದು ಚಾ.ಸಾ.1 ಎಲ್.ಎಂ. ಶರತ್ ರವರು ಅವರ ಅವರ ಕಛೇರಿಯಲ್ಲಿ ಇದ್ದಾಗ, ಆರೋಪಿತರು ಲಕ್ಷ್ಮೀಪುರ ಗ್ರಾಮದ ಲಕ್ಯಾ ಕ್ರಾಸ್ ಬಳಿ ಮಣ್ಣು ಮುಕ್ಕ ಹಾವನ್ನು ಮಾರಾಟ ಮಾಡಲು ಬಂದಿರುತ್ತಾರೆ ಎಂದು ಅವರಿಗೆ ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿ ಮೇರೆಗೆ ಅವರ ಸಿಬ್ಬಂದಿಗಳಾದ ಚಾ.ಸಾ.2 ರಿಂದ 8 ಹಾಗೂ ಪಂಚರಾದ ಚಾ.ಸಾ.9 ಮತ್ತು 10 ರವರೊಂದಿಗೆ ಘಟನಾ ಸ್ಥಳಕ್ಕೆ ಹೋಗಿರುತ್ತಾರೆ. ಆಗ ಆರೋಪಿತರು ಅವರನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿರುತ್ತಾರೆ. ಆಗ ಆರೋಪಿತರನ್ನು ಹಿಡಿದು ಅವರನ್ನು ವಿಚಾರ ಮಾಡಿದಾಗ, ಸದರಿ ಹಾವನ್ನು ಮಾರಾಟ ಮಾಡಲು ತಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ಮಧ್ಯಾಹ್ನ 3-00 ರಿಂದ 4-00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಹಾವನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ನಂತರ ವಶಪಡಿಸಿಕೊಂಡ ಹಾವನ್ನು ಚಾ.ಸಾ.15 ರವರ ಮುಂದೆ ಹಾಜರುಪಡಿಸಿ ದೃಡಪಡಿಸಿಕೊಂಡು ನಂತರ ಆರೋಪಿತರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿರುತ್ತಾರೆ. ನಂತರ ವಶಪಡಿಸಿಕೊಂಡ ಹಾವನ್ನು ನ್ಯಾಯಾಧೀಶರ ಅನುಮತಿ ಪಡೆದು ಚಾ.ಸಾ.12 ರವರಿಗೆ ಹಸ್ತಾಂತರಿಸಿದ್ದಾಗಿರುತ್ತದೆ. ನಂತರ ಚಾ.ಸಾ.1 ರವರು ತನಿಖೆಯನ್ನು ಮುಂದುವರಿಸಿ, ಮೇಲ್ಕಾಣಿಸಿದ ಅಪರಾಧಗಳ ಅಡಿಯಲ್ಲಿ 1 ಮತ್ತು 2 ನೇ ಆರೋಪಿತರು ಅಪರಾದ ಎಸಗಿರುತ್ತಾರೆಂದು ಪಿರ್ಯಾದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. 1 ಮತ್ತು 2 ನೇ ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿದ ನಂತರ, ಈ ನ್ಯಾಯಾಲಯವು ಆರೋಪಣ ಸಂಜ್ಞೆಯವನ್ನು ತೆಗೆದುಕೊಳ್ಳಲಾಯಿತು. ಆರೋಪಿತರು ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ. 207 ರ ಅಡಿಯಲ್ಲಿ ಪಿರ್ಯಾದಿನ ನಕಲುಗಳನ್ನು ಪೂರೈಸಲಾಯಿತು. ತದನಂತರ ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ರಚಿಸಿ ಅವರಿಗೆ ಓದಿ ಹೇಳಿ ವಿವರಿಸಲಾಗಿ, ಆರೋಪಿತರು ತಾನು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಪ್ರಕರಣ ವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಗಿತ್ತು.

4. 1 ಮತ್ತು 2 ನೇ ಆರೋಪಿತರ ವಿರುದ್ಧದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ಪಿರ್ಯಾದಿನಲ್ಲಿ ಒಟ್ಟು 15 ಜನ ಸಾಕ್ಷಿದಾರರನ್ನು ತೋರಿಸಲಾಗಿದ್ದು, ಅವರಲ್ಲಿ 7 ಜನರನ್ನು ಪ್ರಾ.ಸಾ-1 ರಿಂದ ಪ್ರಾ.ಸಾ-07 ಎಂದು ವಿಚಾರಣೆ ಮಾಡಿ, ನಿ.ಪಿ-1 ರಿಂದ ನಿ.ಪಿ-12 ರವರೆಗೆ ದಾಖಲಾತಿಗಳನ್ನು ನಿಶಾನಿಸಿಕೊಂಡಿ ರುತ್ತಾರೆ.

5. ಈ ಪ್ರಕರಣದ ವಿಚಾರಣೆ ಮುಗಿದ ನಂತರ 1 ಮತ್ತು 2 ನೇ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಅವರ ವಿರುದ್ಧದ ಅಭಿಯೋಜನೆ ಪಕ್ಷದ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಬಗ್ಗೆ ಪ್ರಶ್ನಿಸಲಾಗಿ, ಆರೋಪಿತರು ಅಭಿಯೋಜನೆ ಸಾಕ್ಷ್ಯವನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು ತಮ್ಮ ಪರವಾಗಿ ಯಾವುದೇ ರಕ್ಷಣಾತ್ಮಕ ಸಾಕ್ಷಿಗಳನ್ನಾಗಲೀ ಅಥವಾ ದಾಖಲೆಗಳನ್ನಾಗಲೀ ಹಾಜರುಪಡಿಸಿರುವುದಿಲ್ಲ. ಆರೋಪಿ ತರು ದಂಡ ಪ್ರಕ್ರಿಯಾ ಸಂಹಿತೆ ಕಲಂ.437(ಎ)ರಡಿಯಲ್ಲಿನ ಪ್ರಕ್ರಿಯೆಯಂತೆ ಜಾಮೀನಿನ ಭದ್ರತೆಯನ್ನು ನೀಡಿರುತ್ತಾರೆ.

6. ಉಭಯ ಪಕ್ಷಗಳ ವಾದ-ವಿವಾದಗಳನ್ನು ಕೇಳಲಾಯಿತು.

7. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸುತ್ತವೆಃ-

<u>ಅಂ ಶ ಗ ಳು</u>

1. ದಿನಾಂಕಃ 13-04-2022 ರಂದು ಚಿಕ್ಕಮಗಳೂರು ತಾಲೂಕು, ಲಕ್ಷ್ಮೀಪುರ ಗ್ರಾಮದ, ಲಕ್ಯಾ ತಿರುವಿನ ಬಳಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ 1 ಮತ್ತು 2 ನೇ ಆರೋಪಿತರು ವನ್ಯ ಜೀವಿಯಾದ ಒಂದು ಮಣ್ಣು ಮುಕ್ಕ ಹಾವು (Red Sand boa) 1 ನೇ ಆರೋಪಿಯ ಹೊಲದಲ್ಲಿ ಸಿಕ್ಕಿತೆಂದು ಹಿಡಿದು ಅದನ್ನು ಮಾರಾಟ ಮಾಡಲು ಗಿರಾಕಿಗಳಿಗೆ ಕಾಯುತ್ತಿದ್ದು, ಸದರಿ ಕೃತ್ಯವು ವನ್ಯ ಜೀವಿ (ಸಂರಕ್ಷಣಾ) ಕಾಯ್ದೆ 1972 ಸದರಿ ಕಾಯ್ದೆಯ ಕಲಂ 9, 39, 40, 44, 48(ಎ) ಸಹವಾಚಕ ಕಲಂ 50 ನ್ನು ಉಲ್ಲಂಘನೆ ಮಾಡಿ, ಕಲಂ 51 ರ ಅಡಿಯಲ್ಲಿ 1 ಮತ್ತು 2 ನೇ ಆರೋಪಿತರು ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆ ಎಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಭೀತು ಪಡಿಸಿದ್ದಾರೆಯೆ?

2. ಹಾಗಿದ್ದರೆ ಯಾವ ಆಜ್ಞೆ?

8. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆಃ-

ಅಂಶ-1ಃ ಸಕಾರಾತ್ಮಕವಾಗಿ,

ಅಂಶ-2ಃ ಅಂತಿಮ ಆದೇಶದಂತೆ.

-ಃ ಕಾ ರ ಣ ಗ ಳು ಃ-

9. ಅಂಶ-**1**- 1 ಮತ್ತು 2 ನೇ ಆರೋಪಿತರ ವಿರುದ್ಧದ ಆರೋಪವನ್ನು ರುಜುವಾತು ಪಡಿಸುವ ಸಲುವಾಗಿ ಅಭಿಯೋಜನೆಯು ಒಟ್ಟು 07 ಜನ ಸಾಕ್ಷಿದಾರರನ್ನು ವಿಚಾರಣೆ ಮಾಡಿ, ನಿ.ಪಿ-01 ರಿಂದ ನಿ.ಪಿ-11 ರವರೆಗೆ ದಾಖಲೆಗಳನ್ನು ನಿಶಾನೆಗೊಳಿಸಿಕೊಂಡಿರುತ್ತಾರೆ.

10. ಈ ಪ್ರಕರಣದ ಫಿರ್ಯಾದುದಾರರು ಹಾಗೂ ದಾಳಿ ಮಾಡಿ, ಮಹಜರ್ ಕ್ರಮ ಜರುಗಿಸಿದ ಬಗ್ಗೆ ಸಾಕ್ಷಿಯಾದ ಚಾಸಾ-1 ಎಲ್.ಎಂ.ಶರತ್ ರವರನ್ನು ಪ್ರಾಸಾ-1 ರವರನ್ನಾಗಿ ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆ ಯಲ್ಲಿದಿನಾಂಕ 13.04.2022 ರಂದು ಕಚೇರಿಯಲ್ಲಿದ್ದಾಗ ಆರೋಪಿಗಳು ಮಣ್ಣು ಮುಕ್ಕ ಹಾವನ್ನು ಲಕ್ಷ್ಮೀಪುರ ಗ್ರಾಮದ ಲಕ್ಯಾ ಕ್ರಾಸ್ ಬಳಿ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿ ಮೇರೆಗೆ ಮಧ್ಯಾಹ್ನ 2.15 ಕ್ಕೆ ಠಾಣೆಯಿಂದ ಹೊರಟು, ಚಾಸಾ.9 ಮತ್ತು 10 ರವರನ್ನು ಪಂಚರನ್ನಾಗಿ ಮಾಡಿಕೊಂಡು ಮಾಹಿತಿ ಇದ್ದ ಸ್ಥಳಕ್ಕೆ 2.40 ಕ್ಕೆ ಹೋಗಿ ನೋಡಿದಾಗ, ಆರೋಪಿಗಳು ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡು ನಿಂತಿದ್ದರು. ತಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದು, ನಂತರ ಅವರನ್ನು ಸುತ್ತುವರಿದು ಹಿಡಿದು ವಿಚಾರಿಸಿದಾಗ ಸದರಿ ಚೀಲದಲ್ಲಿ ಒಂದು ಮಣ್ಣು ಮುಕ್ಕ ಹಾವು ಇರುವುದು ಕಂಡು ಬಂತು. ನಂತರ ಆರೋಪಿತರನ್ನು ವಿಚಾರಿಸಿದಾಗ ಸದರಿ ಹಾವು ತಮ್ಮ ಜಮೀನಿನಲ್ಲಿ ಸಿಕ್ಕಿರುವುದಾಗಿ ಸದರಿ ಹಾವನ್ನು ಮಾರಾಟ ಮಾಡಲು ಸ್ವಾಧೀನ ಹೊಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ, ಹಾವನ್ನು ವಶಕ್ಕೆ ಪಡೆದುಕೊಂಡಿ ರುತ್ತೇವೆ. ಚಾಸಾ.15 ರವರ ಮುಂದೆ ವಶಪಡಿಸಿಕೊಂಡ ಹಾವನ್ನು ಹಾಜರುಪಡಿಸಿದ ನಂತರ ಆರೋಪಿಗಳನ್ನು ಹಾಗೂ

ವಶಪಡಿಸಿಕೊಂಡ ಹಾವನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ವಶಪಡಿಸಿಕೊಂಡ ಹಾವನ್ನು ನ್ಯಾಯಾಲಯದ ಅನುಮತಿ ಪಡೆದು ಚಾಸಾ.12 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

11. ಪ್ರಾ.ಸಾ.1 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ ನನ್ನ ಸೇವಾ ಅವಧಿಯಲ್ಲಿ ಹಾವನ್ನು ವಾಸ್ತುವಿಗಾಗಿ ಇಟ್ಟುಕೊಂಡಿರುವ ಬಗ್ಗೆ ಗಮನಕ್ಕೆ ಬಂದಿಲ್ಲ ಹಾಗೂ ದಾಳಿ ಮಾಡಿಲ್ಲ. ತನಗೆ ಮಾಹಿತಿ ಎಷ್ಟು ಸಮಯಕ್ಕೆ ಬಂದಿರುತ್ತದೆ ಎಂದು ನಿಪಿ-1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ ಎಂದೂ, ತನಗೆ ಮಾಹಿತಿ ಬಂದ ಅರ್ಧ ಗಂಟೆಯ ಅವಧಿಯಲ್ಲಿಚಾಸಾ.9 ಮತ್ತು 10 ರವನ್ನು ವಿಚಾರ ಮಾಡಿರುತ್ತೇನೆ. ಚಾಸಾ.9 ಮತ್ತು 10 ರವರನ್ನು ತಮ್ಮ ವಾಹನದಲ್ಲಿ ಸುಮಾರು 2.35 ಕ್ಕೆ ಇಲಾಖಾ ವಾಹನಕ್ಕೆ ಹತ್ತಿಸಿಕೊಂಡು ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇವೆ. ಕೃತ್ಯ ನಡೆದ ಸ್ಥಳ ಮೂರು ರಸ್ತೆಗಳು ಇರುವ ಸ್ಥಳವಾಗಿದ್ದು, ಸದರಿ ಸ್ಥಳದ ಹತ್ತಿರ ಅಂಗಡಿಗಳು ಇದ್ದು, ಸ್ವಲ್ಪ ದೂರದಲ್ಲಿ ಮನೆಗಳು ಇವೆ. ಆರೋಪಿತರನ್ನು ಸುಮಾರು 50 ರಿಂದ 100 ಮೀ ದೂರದಲ್ಲಿ ನೋಡಿರುತ್ತೇನೆ. ಯಾವ ಆರೋಪಿತರು ಯಾವ ಕಡೆ ಓಡಿ ಹೋಗಿರುತ್ತಾರೆ ಹಾಗೂ ಯಾವ ಆರೋಪಿಯನ್ನು ಯಾರು ಹಿಡಿದಿರುತ್ತಾರೆ ಎಂದು ತನಗೆ ಗೊತ್ತಿಲ್ಲ. ಸದರಿ ಹಾವು 1 ನೇ ಆರೋಪಿಯ ಜಮೀನಿನಲ್ಲಿ 2 ತಿಂಗಳ ಹಿಂದೆ ಸಿಕ್ಕಿದ್ದಾಗಿ ಹೇಳಿದ್ದು, ಅದರ ಸರ್ವೆ ನಂಬರ್ ತನಗೆ ಗೊತ್ತಿಲ್ಲ. ಮಹಜರ್ ಸಮಯದಲ್ಲಿ ಸ್ಥಳೀಯರು ಪಂಚರಾಗಿ ಬರುವಂತೆ ಕರೆದಿಲ್ಲ. ದಾಳಿ ಮಾಡಲಾಗಿದೆ ಎನ್ನುವ ಸಮಯದಲ್ಲಿ ಆರೋಪಿತರ ವಿರುದ್ದ ಪ್ರಕರಣ ದಾಖಲಾಗಿಲ್ಲ ಎಂದರೆ ಸರಿ. ಮಾಹಿತಿ ಫೋನ್ ಮೂಲಕ ಬಂದಿದ್ದು, ಅದನ್ನು ನಿಪಿ-1 ರಲ್ಲಿ ಬರೆದಿಲ್ಲ. ನಿಪಿ-2 ರಲ್ಲಿ ದಿನಾಂಕ ಮತ್ತು ಸಮಯ ಇಲ್ಲ ಎಂದರೆ ಸರಿ. ನಿಪಿ-2 ರಲ್ಲಿ ಲಕ್ಯಾ ಕ್ರಾಸ್ ಹಾಗೂ ಲಕ್ಷ್ಮೀಪುರ ಎಂದು ಕಾಣುವ ಯಾವುದೇ ಕುರುಹುಗಳು

ಇಲ್ಲ ಎಂದರೆ ಸರಿ ಎಂದೂ, ಸ್ಥಳದಲ್ಲಿ ಇನ್ನು ಸ್ವಲ್ಪ ಜನರಿದ್ದು, ಅವರನ್ನು ವಿಚಾರಣೆ ಮಾಡಿಲ್ಲ. ಹಾವಿನ ಲಿಂಗ ಮತ್ತು ವಯಸ್ಸನ್ನು ನಮೂದಿಸಿಲ್ಲ ಎಂದರೆ ಸರಿ ಎಂದು ಸಾಕ್ಷ್ಯ ನುಡಿರುತ್ತಾರೆ.

12. ಚಾಸಾ-1 ರವರಿಗೆ ದಾಳಿಯ ಕಾಲಕ್ಕೆ ಸಹಕರಿಸಿದ ಬಗ್ಗೆ ಹಾಗೂ ಪ್ರತ್ಯಕ್ಷ್ಯ ಸಾಕ್ಷಿದಾರರಾದ ಚಾ.ಸಾ.2 ಹೆಚ್.ದೇವರಾಜ ರವರನ್ನು ಪ್ರಾ.ಸಾ.2 ಎಂದು ಸಾಕ್ಷಿ ವಿಚಾರಣೆ ಮಾಡಿಸಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 13.04.2022 ರಂದು ತಾವು ಕಛೇರಿಯಲ್ಲಿದ್ದಾಗ ಮದ್ಯಾಹ್ನ 1-00 ಗಂಟೆಗೆ ಚಾಸಾ 1 ರವರಿಗೆ ಲಕ್ಷ್ಮಿಪುರ ಗ್ರಾಮದ ಲಕ್ಯಾ ಕ್ರಾಸ್ ಬಳಿ ಆರೋಪಿಗಳು ಮಣ್ಣು ಮುಕ್ಕ ಹಾವನ್ನು ಮಾರಾಟ ಮಾಡಲು ಗಿರಾಕಿಗಳಿಗೆ ಕಾಯುತ್ತಿದ್ದಾರೆ ಎಂದು ಬಂದ ಮಾಹಿತಿಯನ್ನು ತಮಗೆ ತಿಳಿಸಿರುತ್ತಾರೆ. ನಂತರ ಚಾಸಾ 1 ರವರು ಚಾಸಾ 9 ಮತ್ತು 10 ರವರಿಗೆ ದೂರವಾಣಿ ಕರೆ ಮಾಡಿ, ಮಾಹಿತಿ ವಿಚಾರ ತಿಳಿಸಿ ಎ ಐ ಟಿ ವೃತ್ತದ ಬಳಿ ಬರುವಂತೆ ತಿಳಿಸಿರುತ್ತಾರೆ. ಮದ್ಯಾಹ್ನ 2-15 ಕ್ಕೆ ಕಛೇರಿಯಿಂದ ಇಲಾಖಾ ವಾಹನದಲ್ಲಿ ತಾನು, ಚಾಸಾ 1, 3 ರಿಂದ 8 ರವರು ಹೊರಟು ಎ ಐ ಟಿ ವೃತ್ತದ ಬಳಿ ಹೋಗಿ ಚಾಸಾ 9 ಮತ್ತು 10 ರವರಿಗೆ ನೋಟಿಸು ಜಾರಿ ಮಾಡಿ, ಅವರನ್ನು ಇಲಾಖಾ ವಾಹನದಲ್ಲಿ ಕೂರಿಸಿಕೊಂಡು ಲಕ್ಯಾ ಕ್ರಾಸ್ ಬಳಿ ಹೋಗಿ ನೋಡಿದಾಗ ಕಣ್ಣಂಚಿನ ದೂರದಲ್ಲಿ ಆರೋಪಿಗಳು ಪ್ಲಾಸ್ಟಿಕ್ ಚೀಲದಲ್ಲಿ ಏನನ್ನೋ ಹಿಡಿದುಕೊಂಡು ಯಾರಿಗೋ ಕಾಯುತ್ತಿರುವುದು ಕಂಡುಬಂದಿರುತ್ತದೆ. ತಾವುಗಳು ಸಮೀಪಕ್ಕೆ ಹೋದಾಗ ತಮ್ಮನ್ನು ಕಂಡು ಗಾಬರಿಗೊಂಡು ಓಡಲು ಪ್ರಯತ್ನಿಸಿದವರನ್ನು ಹಿಡಿದು ಪಂಚರ ಸಮಕ್ಷಮ ಪ್ಲಾಸ್ಟಿಕ್ ಚೀಲದಲ್ಲಿ ಏನು ಇದೆ ಎಂದು ವಿಚಾರಿಸಿ ನೋಡಲಾಗಿ ಅದರಲ್ಲಿ ಒಂದು ಮಣ್ಣು ಮುಕ್ಕ ಹಾವು ಇರುವುದಾಗಿ ಹಾಗೂ ಅದನ್ನು ಮಾರಾಟ ಮಾಡಲು ಗಿರಾಕಿಗಳಿಗೆ ಕಾಯುತ್ತಿರುವುದಾಗಿ ತಿಳಿಸಿರುತ್ತಾರೆ. 1 ನೇ ಆರೋಪಿ ಹಾವು ಸಿಕ್ಕ ವಿಷಯವನ್ನು 2 ನೇ

ಆರೋಪಿಗೆ ತಿಳಿಸಿದ್ದು ಗಿರಾಕಿಯನ್ನು ಹುಡುಕಿ ಮಾರಾಟ ಮಾಡಿಸಿಕೊಡಬೇಕೆಂದು ಹೇಳಿರುವುದಾಗಿ ತಿಳಿಸಿರುತ್ತಾರೆಂದೂ, ನಂತರ ಸ್ಥಳದಲ್ಲಿಯೇ ಪಂಚರ ಸಮಕ್ಷಮ ಮಹಜರು ಕ್ರಮ ಜರುಗಿಸಿ ಹಾವನ್ನು ಅಮಾನತುಪಡಿಸಿಕೊಂಡಿರುತ್ತಾರೆ. ನಂತರ ಆರೋಪಿ ಗಳನ್ನು ಹಾಗೂ ಸ್ವತ್ತುಗಳೊಂದಿಗೆ ಕಛೇರಿಗೆ ವಾಪಾಸ್ಸಾಗಿದ್ದು, ಚಾಸಾ 1 ರವರು ಮುಂದಿನ ಕ್ರಮ ಕೈಗೊಂಡಿರುತ್ತಾರೆ. ಹಾವನ್ನು ಪಶುವೈದ್ಯಾಧಿಕಾರಿಗಳ ಬಳಿ ಪರೀಕ್ಷೆ ಮಾಡಿಸಿ ನ್ಯಾಯಾಲಯದ ಅನುಮತಿ ಪಡೆದು, ಹಾವು ಹಾಗೂ ಚೀಲವನ್ನು ಆರ್ ಎಫ್ ಓ ರವರಿಗೆ ಹಸ್ತಾಂತರಿಸಲಾಗಿದ್ದು ಆ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

13. ಪ್ರಾ.ಸಾ.2 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಸದರಿ ಸಾಕ್ಷಿದಾರರು ತಮ್ಮ ಪಾಟೀ ಸವಾಲಿನಲ್ಲಿ ಮಾಹಿತಿ ಚಾಸಾ-1 ರವರಿಗೆ ದೂರವಾಣಿ ಮೂಲಕ ಬಂದಿದ್ದು ಆ ಬಗ್ಗೆ ನಿಪಿ-1 ರಲ್ಲಿ ನಮೂದಿಸಿಲ್ಲ. ನಿಪಿ-1 ಮಹಜರು ಬರೆಯುವ ಸಮಯದಲ್ಲಿ ಆರೋಪಿಗಳ ವಿರುದ್ದ ಪ್ರಕರಣ ದಾಖಲಾಗಿರಲಿಲ್ಲ. ನಾವು ಹೋಗುವ ಮುನ್ನವೇ ಎ ಐ ಟಿ ವೃತ್ತದ ಬಳಿ ಚಾಸಾ 9 ಮತ್ತು 10 ಬಂದಿದ್ದರು. ನಾವು ಅಂದಾಜು 2-20 ಕ್ಕೆ ಎ ಐ ಟಿ ವೃತ್ತದ ಬಳಿ ಹೋಗಿರುತ್ತೇವೆ. ಕಛೇರಿಯಿಂದ ಲಕ್ಯಾ ಕ್ರಾಸ್ 10 ಕಿ ಮೀ ಇರಬಹುದು. ಚಾಸಾ 9 ಮತ್ತು 10 ರವರು ಎ ಐ ಟಿ ವೃತ್ತದಿಂದ ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋಗಿದ್ದು, ಇಲಾಖಾ ಸಿಬ್ಬಂದಿ ಅವರ ಬೈಕನ್ನು ಸ್ಥಳಕ್ಕೆ ತೆಗೆದುಕೊಂಡು ಹೋದ ಬಗ್ಗೆ ನಿಪಿ-1 ರಲ್ಲಾಗಲಿ, ನನ್ನ ಹೇಳಿಕೆಯಲ್ಲಾಗಲಿ ಹೇಳಿಲ್ಲ. ನಾವು ನೋಡಿದ ಸಮಯದಲ್ಲಿ ಆರೋಪಿಗಳು ಕಡೂರು ಚಿಕ್ಕಮಗಳೂರು ರಸ್ತೆಯಲ್ಲಿದ್ದರು. ಆರೋಪಿತರು ಯಾವ ದಿಕ್ಕಿನಲ್ಲಿ ಓಡಿ ಹೋಗಿರುತ್ತಾರೆ ಎಂದು ಹಾಗೂ ಯಾವ ಆರೋಪಿ ಹಿಂದೆ ಯಾವ ಸಿಬ್ಬಂದಿ ಓಡಿ ಹೋಗಿರುತ್ತಾರೆ ಎಂದು ನೆನಪಿಲ್ಲ. ಆರೋಪಿತರು ಸುಮಾರು 10 ರಿಂದ 20 ಮೀಟರ್

ದೂರ ಓಡಿ ಹೋಗಿರುತ್ತಾರೆ. ಹಾವು ಎಷ್ಟು ದಿನದ ಮುಂಚೆ ಸಿಕ್ಕಿರುತ್ತದೆ ಎಂದು ನಾವು ಕೇಳಿ ತಿಳಿದುಕೊಂಡಿರುವುದಿಲ್ಲ. ಪಂಚರನ್ನು ಕರೆದುಕೊಂಡು ಹೋಗಿದ್ದ ಕಾರಣ ಸ್ಥಳೀಯರನ್ನು ಪಂಚರನ್ನಾಗಿ ಬರುವಂತೆ ಕರೆದಿಲ್ಲ ಎಂದು ಸಾಕ್ಷ್ಯ ನುಡಿರುತ್ತಾರೆ.

14. ಚಾಸಾ-1 ರವರಿಗೆ ದಾಳಿಯ ಕಾಲಕ್ಕೆ ಸಹಕರಿಸಿದ ಬಗ್ಗೆ ಹಾಗೂ ಪ್ರತ್ಯಕ್ಷ್ಯ ಸಾಕ್ಷಿದಾರರಾದ ಚಾ.ಸಾ.3 ಚರಣ್ ಕುಮಾರ್ ರವರನ್ನು ಪ್ರಾ.ಸಾ.3 ಎಂದು ಸಾಕ್ಷಿ ವಿಚಾರಣೆ ಮಾಡಿಸಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 13.04.2022 ಚಾಸಾ 1 ರವರು ಫೋನ್ ಮೂಲಕ ಮಾಹಿತಿ ವಿಚಾರ ತಿಳಿಸಿ ದಾಳಿ ಮಾಡುವ ಸಲುವಾಗಿ ಎ ಐ ಟಿ ವೃತ್ತದ ಬಳಿ ಬರುವಂತೆ ತಿಳಿಸಿದ್ದು , ತಾನು ಮತ್ತು ಚಾಸಾ 10 ರವರು ಎ ಐ ಟಿ ವೃತ್ತದ ಬಳಿ ಕಾಯುತ್ತಿದ್ದಾಗ, ಚಾಸಾ 1 ಹಾಗೂ ಅವರ ಸಿಬ್ಬಂದಿ ಇಲಾಖಾ ಜೀಪಿನಲ್ಲಿ ಅಲ್ಲಿಗೆ ಬಂದು ತಮಗೆ ನೋಟಿಸು ಜಾರಿ ಮಾಡಿ ತಮ್ಮ ಸಹಿ ಪಡೆದುಕೊಂಡಿರುತ್ತಾರೆ. ಅಲ್ಲಿಂದ ತಮ್ಮನ್ನು ಲಕ್ಷ್ಮೀಪುರದ ಲಕ್ಯಾ ಕ್ರಾಸ್ ಬಳಿಗೆ ಕರೆದುಕೊಂಡು ಹೋದಾಗ ಅಲ್ಲಿ ಆರೋಪಿಗಳು ಪ್ಲಾಸ್ಟಿಕ್ ಚೀಲದಲ್ಲಿ ಏನೋ ಇಟ್ಟುಕೊಂಡಿದ್ದರು. ತಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದಾಗ ಚಾಸಾ 1 ಹಾಗೂ ಅವರ ಸಿಬ್ಬಂದಿ ಅವರನ್ನು ಹಿಡಿದು ವಿಚಾರಣೆ ಮಾಡಲಾಗಿ ಚೀಲದಲ್ಲಿ ಮಣ್ಣು ಮುಕ್ಕ ಹಾವು ಇರುವುದಾಗಿ ಮತ್ತು ಅದನ್ನು ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿರುತ್ತಾರೆ. ಪೋಲೀಸರು ಹಾವಿನ ಉದ್ದ ಮತ್ತು ಅಗಲವನ್ನು ಅಳತೆ ಮಾಡಿ ಪ್ಲಾಸ್ಟಿಕ್ ಚೀಲಕ್ಕೆ ಹಾಕಿ, ತಮ್ಮ ಸಮಕ್ಷಮ ಮಹಜರು ಮಾಡಿ, ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

15. ಪ್ರಾ.ಸಾ.3 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಸದರಿ ಸಾಕ್ಷಿದಾರರು ತಮ್ಮ ಪಾಟೀ ಸವಾಲಿನಲ್ಲಿ ಚಾ.ಸಾ.1 ರವರು

ಮಧ್ಯಾಹ್ನ 1-00 ಗಂಟೆಗೆ ಕರೆ ಮಾಡಿ ಎ ಐ ಟಿ ವೃತ್ತದ ಬಳಿ ಬರುವಂತೆ ತಿಳಿಸಿರುತ್ತಾರೆ ಎಂದೂ, ನಿಪಿ.4 ರ ಪ್ರತಿಯನ್ನು ತಮಗೆ ನೀಡಿದ್ದು, ಅದರಲ್ಲಿ ಏನನ್ನು ಬರೆಯಲಾಗಿದೆ ಎಂದು ತನಗೆ ಹೇಳಲಾಗುವುದಿಲ್ಲ ಎಂದೂ, ಆರೋಪಿಗಳು ಸುಮಾರು 10-15 ಅಡಿ ದೂರ ಓಡಿ ಹೋಗಿದ್ದು, ಪೋಲೀಸರು ಅವರನ್ನು ಹಿಡಿದಿದ್ದು, ಆಗ ಅವರು ಪ್ಲಾಸ್ಟಿಕ್ ಚೀಲವನ್ನು ಬಿಟ್ಟು ಹೋಗಿರುತ್ತಾರೋ ಇಲ್ಲವೋ ಎಂದು ತನಗೆ ನೆನಪಿಲ್ಲ ಎಂದೂ, ನಿಪಿ.1 ರಲ್ಲಿ ಏನು ಬರೆಯಲಾಗಿದೆ ಎಂದು ತನಗೆ ಗೊತ್ತಿಲ್ಲ ಎಂದು ಒಪ್ಪಿತ ಹೇಳಿಕೆಯನ್ನು ನುಡಿದಿರುತ್ತಾರೆ.

16. ಈ ಪ್ರಕರಣದಲ್ಲಿ ಚಾಸಾ-1 ರವರ ಜೊತೆ ದಾಳಿಯ ಕಾಲಕ್ಕೆ ಸಹಕರಿಸಿದ ಬಗ್ಗೆ ಹಾಗೂ ಪ್ರತ್ಯಕ್ಷ್ಯ ಸಾಕ್ಷಿದಾರರಾದ ಚಾ.ಸಾ.3 ರಿಂದ 8 ಮತ್ತು 10 ರವರ ಸಾಕ್ಷ್ಯವನ್ನು ಕೈಬಿಡಲಾಗಿರುತ್ತದೆ.

17. ಈ ಪ್ರಕರಣದಲ್ಲಿ ಆರೋಪಿತರ ಸ್ವಇಚ್ಛಾ ಹೇಳಿಕೆಗಳನ್ನು ಪಡದುಕೊಂಡು ಬಂದು ಹಾಜರು ಪಡಿಸಿದ ಬಗ್ಗೆ ಸಾಕ್ಷಿದಾರರಾದ ಚಾ.ಸಾ.11 ಗಿರೀಶ್ ಪಿ. ರವರನ್ನು ಪ್ರಾ.ಸಾ.6 ಎಂದು ಸಾಕ್ಷಿ ವಿಚಾರಣೆ ಮಾಡಿಸಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 13/04/2022 ರಂದು ಚಾ.ಸಾ.1 ರವರು ಸಿಬ್ಬಂಧಿಗಳ ಮುಖಾಂತರ ಆರೋಪಿತರ ಸ್ವಇಚ್ಛಾ ಹೇಳಿಕೆಯನ್ನು ಪಡೆದು, ನೀಡುವಂತೆ ಕೋರಿಕೊಂಡ ಮೇರೆಗೆ ಮನವಿ ಮತ್ತು ಆರೋಪಿತರನ್ನು ಹಾಜರುಪಡಿಸಿರುತ್ತೇನೆ. ಆರೋಪಿತರು ನೀಡಿದ ಸ್ವಇಚ್ಛಾ ಹೇಳಿಕೆಗಳನ್ನು ದಾಖಲಿಸಿಕೊಂಡು ಚಾ.ಸಾ.1 ರವರಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮೇಲ್ಕಂಡ ಪ್ರಾಸಾ-6 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದಾಗ್ಯೂ ಕೂಡ ತನ್ನ ಮುಖ್ಯ ವಿಚಾರಣೆಗೆ ವ್ಯತಿರಿಕ್ತವಾಗಿ ಯಾವುದೇ ಹೇಳಿಕೆಯನ್ನು ಪಡೆಯಲು ವಿಫಲರಾಗಿರುತ್ತಾರೆ.

18. ಈ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಮಣ್ಣು ಮುಕ್ಕ ಹಾವನ್ನು ಮತ್ತಾವರ ಮೀಸಲು ಅರಣ್ಯಕ್ಕೆ ಬಿಡುವ ಸಮಯದಲ್ಲಿ ತಯಾರಿಸಿದ ಮಹಜರ್ ಬಗ್ಗೆ ಸಾಕ್ಷಿದಾರರಾದ ಚಾ.ಸಾ.12 ಸ್ವಾತಿ ಹಾಗೂ ಚಾ.ಸಾ.13 ಗೌರೀಶ್ ರವರನ್ನು ಪ್ರಾ.ಸಾ.4 ಮತ್ತು 5 ಎಂದು ಸಾಕ್ಷಿ ವಿಚಾರಣೆ ಮಾಡಿಸಿದ್ದು, ಪ್ರಾ.ಸಾ.4 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 13-04-2022 ರಂದು ಚಿಕ್ಕಮಗಳೂರು ಅರಣ್ಯ ಸಂಚಾರಿ ದಳದಲ್ಲಿ ಪ್ರಕರಣ ಸಂಖ್ಯೆ 2/22 ಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಅದೇಶದ ಪ್ರಕಾರ ಒಂದು ಮಣ್ಣು ಮುಕ್ಕ ಹಾವನ್ನು ಹಸ್ತಾಂತರ ಮಾಡಿರುತ್ತಾರೆ. ಸದರಿ ಮಣ್ಣು ಮುಕ್ಕ ಹಾವು ಪ್ರಕರಣದ ಮುಂದಿನ ತನಿಖೆಗೆ ಅವಶ್ಯಕತೆ ಇರುವುದಿಲ್ಲವೆಂದು ತಿಳಿದುಕೊಂಡು ನ್ಯಾಯಾಲಯದ ಆದೇಶದಂತೆ ಅದನ್ನು ಸುರಕ್ಷಿತ ಸ್ಥಳದಲ್ಲಿ ಬಿಡಲು ಆದೇಶ ಪಡೆದುಕೊಂಡು ಅದರಂತೆ ದಿ: 14.04.2022 ರಂದು ಮತ್ತಾವರ ಕೇಂದ್ರದ ಮೇಲಿರುವ ಮತ್ತಾವರ ಅರಣ್ಯ ಪ್ರದೇಶದಲ್ಲಿ ಚಾಸಾ 13 ಮತ್ತು 14 ರವರೊಂದಿಗೆ ಮಣ್ಣು ಮುಕ್ಕ ಹಾವನ್ನು ಅರಣ್ಯದಲ್ಲಿ ಬಿಟ್ಟಿರುತ್ತೇವೆ. ಹಾವನ್ನು ಬಿಡುವ ಸಮಯದಲ್ಲಿ ಛಾಯಾಚಿತ್ರ ಮತ್ತು ವಿಡಿಯೋ ಚಿತ್ರೀಕರಿಸಿ ಮತ್ತು ಸದರಿ ಮಣ್ಣು ಮುಕ್ಕ ಹಾವು ಕಣ್ಮರೆಯಾಗುವವರೆಗೂ ಅಲ್ಲೇ ವೀಕ್ಷಿಸಿ ನಂತರ ಸದರಿ ಪ್ರಕ್ರಿಯೆಯನ್ನು ಪಂಚನಾಮೆ ಮೂಲಕ ದಾಖಲಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

19. ಪ್ರಾ.ಸಾ.4 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಸದರಿ ಸಾಕ್ಷಿದಾರರು ತಮ್ಮ ಪಾಟೀ ಸವಾಲಿನಲ್ಲಿ ಮಣ್ಣುಮುಕ್ಕ ಹಾವನ್ನು ಪಡೆದುಕೊಳ್ಳುವ ಸಮಯದಲ್ಲಿ ಅದು ಎಷ್ಟು ವಯಸ್ಸು ಹಾಗೂ ಯಾವ ಲಿಂಗಕ್ಕೆ ಸಂಬಂಧಿಸಿದ್ದು ಎನ್ನುವುದರ ಬಗ್ಗೆ ಮಾಹಿತಿಯನ್ನು ತಾನು ಅರಣ್ಯ ಸಂಚಾರಿ ದಳದವರಿಂದ ಹಾಗೂ ಪಶುವೈದ್ಯಾಧಿಕಾರಿಗಳಿಂದ ಹೆಲ್ತ್ ಫಿಟ್ನೆಸ್ ಸರ್ಟಿಫಿಕೇಟ್ ಪಡೆದುಕೊಂಡಿರುವುದಿಲ್ಲ.ಹಾವನ್ನು ಅರಣ್ಯದೊಳಗೆ ಬಿಡುವ ಸಮಯದಲ್ಲಿ

ಸಾರ್ವಜನಿಕರನ್ನು ಅದರ ಸಲುವಾಗಿ ಸಂಪರ್ಕಿಸಿರುವುದಿಲ್ಲ ಎಂದು ಹೇಳಿಕೆಯನ್ನು ನುಡಿದಿರುತ್ತಾರೆ.

20. ಪ್ರಾ.ಸಾ.5 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ 1 ರವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜೀವಂತ ಮಣ್ಣು ಮುಕ್ಕ ಹಾವನ್ನು ಮಾನ್ಯ ನ್ಯಾಯಾಲಯದ ಆದೇಶದಂತೆ ಚಾಸಾ 12 ರವರ ಸುಪರ್ದಿಗೆ ನೀಡಿದ್ದು ಆ ಸಮಯದಲ್ಲಿ ಚಾಸಾ 12 ರವರೊಂದಿಗೆ ತಾನು ಮತ್ತು ಚಾಸಾ 14 ರವರು ಜೊತೆಯಲ್ಲಿದ್ದೆವು. ಸದರಿ ಮಣ್ಣು ಮುಕ್ಕ ಹಾವವನ್ನು ಪಶು ವೈದ್ಯಾಧಿಕಾರಿಗಳ ಆದೇಶದಂತೆ 2 ದಿನಗಳ ಕಾಲ ಪರಿವೀಕ್ಷಣೆ ಯಲ್ಲಿಟ್ಟಿದ್ದು, ಸದರಿ ಹಾವು ಆರೋಗ್ಯವಾಗಿದೆ ಎಂಬುದನ್ನು ದೃಢಿಪಡಿಸಿಕೊಂಡು ದಿನಾಂಕ 16.04.2022 ರಂದು ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಚಾಸಾ 12 ರವರ ಸಮಕ್ಷಮ ನಾನು ಮತ್ತು ಚಾಸಾ 14 ರವರು ಮತ್ತಾವರ ಅರಣ್ಯ ಮೀಸಲು ಅರಣ್ಯ ಪ್ರದೇಶಕ್ಕೆ ಹೋಗಿ ಸದರಿ ಹಾವನ್ನು ಕಾಡಿಗೆ ಜೀವಂತವಾಗಿ ಬಿಟ್ಟು ಅದು ಕಾಡಿನಿಂದ ಮರೆಯಾದ ತಕ್ಷಣ ತಾವು ಹಿಂದಿರುಗಿರುತ್ತೇವೆ. ಸದರಿ ಮಣ್ಣು ಮುಕ್ಕ ಹಾವನ್ನು ಕಾಡಿನೊಳಗೆ ಬಿಡುವ ಸಮಯದಲ್ಲಿ ಮಹಜರು ಪ್ರಕ್ರಿಯೆಯನ್ನು ಸಂಜೆ 5-00 ರಿಂದ 5-30 ರ ಸಮಯದಲ್ಲಿ ಜರುಗಿಸಿ ನಂತರ ಕಛೇರಿಗೆ ವಾಪಸ್ಸಾಗಿ ಸ್ಥಳದಲ್ಲಿ ತನ್ನ ಮೊಬೈಲೆನಿಂದ ಮಾಡಿದ್ದ ಛಾಯಾಗ್ರಹಣವನ್ನು ಕಂಪ್ಯೂಟರಿಗೆ ವರ್ಗಾಯಿಸಿಕೊಂಡು ನಂತರ ಅದನ್ನು ಸಿ ಡಿ ಗೆ ವರ್ಗಾಯಿಸಿಕೊಂಡು ಚಾಸಾ 12 ರವರಿಗೆ ಸಿ ಡಿ ಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

21. ಪ್ರಾಸಾ-5 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು ತನ್ನ ಪಾಟೀ ಸವಾಲಿನಲ್ಲಿ ಚಾ.ಸಾ.12 ರವರು ತನಗೆ ಮಣ್ಣು ಮುಕ್ಕ ಹಾವನ್ನು ಕಾಡಿನೊಳಗೆ ಬಿಡಲು ಲಿಖಿತವಾಗಿ ನೋಟೀಸ್ ನೀಡಿರುವ ಬಗ್ಗೆ ತನಗೆ ಮಾಹಿತಿ

ಇಲ್ಲ ಎಂದೂ, ಮಣ್ಣು ಮುಕ್ಕ ಹಾವನ್ನು ಕಾಡಿನೊಳಗೆ ಬಿಡುವ ಸಮಯದಲ್ಲಿ ಅಕ್ಕಪಕ್ಕದ ಗ್ರಾಮಸ್ಥರನ್ನು ಬರಮಾಡಿಕೊಂಡಿಲ್ಲ ಎಂದು ಹೇಳಿಕೆಯನ್ನು ನುಡಿದಿರುತ್ತಾರೆ.

22. ಈ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಮಣ್ಣು ಮುಕ್ಕ ಹಾವನ್ನು ಮತ್ತಾವರ ಮೀಸಲು ಅರಣ್ಯಕ್ಕೆ ಬಿಡುವ ಸಮಯದಲ್ಲಿ ತಯಾರಿಸಿದ ಮಹಜರ್ ನ ಇನ್ನೊಬ್ಬ ಸಾಕ್ಷಿದಾರರಾದ ಚಾ.ಸಾ.14 ರವರಿಗೆ ನ್ಯಾಯಾಲಯವು ಹಲವಾರು ಬಾರಿ ಸಮನ್ಸ್ ಹಾಗೂ ವಾರೆಂಟ್ ನೀಡಿದಾಗ್ಯೂ ಸಹ ಅವರ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಅವರ ಸಾಕ್ಷ್ಯವನ್ನು ಈ ಪ್ರಕರಣದಿಂದ ಕೈ ಬಿಡಲಾಗಿರುತ್ತದೆ.

23. ಈ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಮಣ್ಣು ಮುಕ್ಕ ಹಾವನ್ನು ಪರೀಕ್ಷಿಸಿ ವರದಿ ನೀಡಿದ ಬಗ್ಗೆ ಸಾಕ್ಷಿ ನುಡಿದ ಸಾಕ್ಷಿದಾರರಾದ ಚಾ.ಸಾ.15 ಡಾ.ಯಶಸ್ ರವರನ್ನು ಪ್ರಾ.ಸಾ.7 ಎಂದು ಸಾಕ್ಷ್ಯ ವಿಚಾರಣೆ ಮಾಡಿದ್ದು, ಸದರಿ ಸಾಕ್ಷಿದಾರರು ತನ್ನ ಮುಖ್ಯ ವಿಚಾರಣೆಯಲ್ಲಿ ದಿನಾಂಕ 13/04/2022 ರಂದು ಚಾ.ಸಾ.1 ರವರು ಒಂದು ರೆಡ್ ಸ್ಯಾಂಡ್ ಹಾವನ್ನು ಹಾಜರುಪಡಿಸಿದ್ದು, ಅದನ್ನು ಪರಿಶೀಲಿಸಿದಾಗ ಅದು ಬದುಕಿದ್ದು, ಆರೋಗ್ಯ ಸ್ಥಿತಿಯು ಉತ್ತಮವಾಗಿತ್ತು.ಸದರಿ ಹಾವನ್ನು ಪರಿಶೀಲಿಸಿ ಅದು ರೆಡ್ ಸ್ಯಾಂಡ್ ಹಾವು ಎಂದು ದೃಡೀಕರಿಸಿ, ದೃಡೀಕರಣವನ್ನು ಚಾ.ಸಾ.1 ರವರಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ.

24. ಪ್ರಾಸಾ-7 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ ಚಾ.ಸಾ.1 ರವರು ಹಾವನ್ನು ಪರಿಶೀಲಿಸಿ ವರದಿ ನೀಡುವಂತೆ ಮನವಿ ಪತ್ರ ಸಲ್ಲಿಸಿದ್ದರು ಎಂದೂ, ಹಾವು ಊಟ ತಿಂದ ಬಗ್ಗೆ ಯಾವುದೇ

ಪರೀಕ್ಷೆ ಮಾಡಿರುವುದಿಲ್ಲ. ಸದರಿ ಹಾವು ಯಾವ ಲಿಂಗಕ್ಕೆ ಸೇರಿರುತ್ತದೆ ಎಂದು ತಾನು ಪರೀಕ್ಷೆ ಮಾಡಿಲ್ಲ ಎಂದು ನುಡಿದಿರುತ್ತಾರೆ.

25. ಮೇಲ್ಕಂಡ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ರಂತೆ ಮಹಜರ್ ನ್ನು, ನಿಪಿ-2 ರಂತೆ ಛಾಯಾಚಿತ್ರವನ್ನು, ನಿಪಿ-3 ರಂತೆ ಸಿ.ಡಿ. ಯನ್ನು, ನಿಪಿ-4 ರಂತೆ ನೋಟೀಸನ್ನು, ನಿಪಿ-5 ರಂತೆ ನಿವೇದನೆಯನ್ನು, ನಿಪಿ-6 ರಂತೆ ಮಹಜರ್ ನ್ನು, ನಿಪಿ-7 ರಂತೆ 65 ಬಿ ಪ್ರಮಾಣ ಪತ್ರವನ್ನು, ನಿಪಿ-8 ರಂತೆ ಮನವಿಯನ್ನು, ನಿಪಿ-9 ಮತ್ತು 10 ರಂತೆ ಆರೊಪಿತರ ಸ್ವಇಚ್ಛಾ ಹೇಳಿಕೆಗಳನ್ನು, ನಿಪಿ-11 ಮತ್ತು 12 ರಂತೆ ಮನವಿ ಮತ್ತು ವರದಿಯನ್ನು ನಿಶಾನೆಗೊಳಿಸಿಕೊಂಡಿರುತ್ತಾರೆ.

26. ಈ ಪ್ರಕರಣದ ದಾಖಲಾತಿಗಳನ್ನು ಪರಿಶೀಲನೆ ಮಾಡಲಾಗಿ, ಪ್ರಕರಣದ ಆರೋಪಿತರು ದಿನಾಂಕ: 13-04-2022 ರಂದು ಲಕ್ಷ್ಮೀಪುರ ಗ್ರಾಮದ, ಲಕ್ಯಾ ತಿರುವಿನ ಬಳಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಒಂದು ಮಣ್ಣು ಮುಕ್ಕ ಹಾವು (Red Sandboa) ವನ್ನು ಹಿಡಿದುಕೊಂಡು ನಿಂತಿದ್ದು, ಮತ್ತು ಸದರಿ ಹಾವು 1 ನೇ ಆರೋಪಿಯ ಹೊಲದಲ್ಲಿ ಸಿಕ್ಕಿದ್ದು, ಅದನ್ನು ಮಾರಾಟ ಮಾಡಲು ಗಿರಾಕಿಯನ್ನು ಹುಡುಕಲು 2 ನೇಆರೋಪಿಗೆ ತಿಳಿಸಿದ್ದರು ಎಂದು ಆರೋಪಿಸಲಾಗಿರುತ್ತದೆ.

27. ಈ ಪ್ರಕರಣದಲ್ಲಿ ಚಾ.ಸಾ.1 ಫಿರ್ಯಾದುದಾರರಾದ ಶರತ್ ರವರು ಅಭಿಯೋಜನೆಯ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿದಿದ್ದು, ಇವರು ತಾವು ಮಾಹಿತಿ ಸ್ವೀಕರಿಸಿದ ಬಗ್ಗೆ ಮತ್ತು ಚಾ.ಸಾ.9 ಮತ್ತು 10 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಮಾಹಿತಿ ಇದ್ದ ಸ್ಥಳಕ್ಕೆ ಹೋದ ಬಗ್ಗೆ ಹಾಗೂ ಆರೋಪಿತರಿಬ್ಬರನ್ನು ವಶಕ್ಕೆ ಪಡೆದ ಬಗ್ಗೆ ಹಾಗೂ ಮಣ್ಣು ಮುಕ್ಕ ಹಾವಿನ ಸಮೇತ ಚೀಲದಲ್ಲಿ ಹಾಕಿದ ಬಗ್ಗೆ

ಹಾಗೂ ಹಾವನ್ನು ಪಂಚರ ಸಮಕ್ಷಮ ಮಧ್ಯಾಹ್ನ 3-00 ರಿಂದ 4-0 ಗಂಟೆಯವರೆ ಮಹಜರ್ ಕ್ರಮ ಜರುಗಿಸಿ ವಶಪಡಿಸಿಕೊಂಡ ಬಗ್ಗೆ ಮತ್ತು ಛಾಯಾಚಿತ್ರವನ್ನು ತೆಗೆದ ಬಗ್ಗೆ ಸ್ಪಷ್ಟವಾಗಿ ಸಾಕ್ಷ್ಯ ನುಡಿದಿರುತ್ತಾರೆ.

28. ಸದರಿ ಸಾಕ್ಷಿದಾರರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ತಮ್ಮ ಪಾಟೀ ಸವಾಲಿನಲ್ಲಿ ಸದರಿ ಮಣ್ಣು ಮುಕ್ಕ ಹಾವನ್ನು ಯಾವ ಉಧ್ದೇಶಕಾಗಿ ಮಾರಾಟ ಮಾಡುತ್ತಾರೆಂದು ಕೇಳಿದಾಗ, ಸಾಕ್ಷಿಯು ವಾಸ್ತುವಿಗೆ ಮತ್ತು ಕಳ್ಳ ಸಾಗಾಣಿಕೆಗೆ ಬಳಸುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಹಾಗೂ ಚಾ.ಸಾ.9 ಮತ್ತು 10 ಪಂಚರು ಖಾಸಾ ಸಹೋದರರು ಎಂದರೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಹಾಗೂ ಹಾವು 1 ನೇ ಆರೋಪಿಗೆ ಹೇಗೆ ಸಿಕ್ಕಿತು ಎಂದರೆ ಆರೋಪಿತರ ಸ್ವಇಚ್ಛಾ ಹೇಳಿಕೆಯ ಪ್ರಕಾರ ಸದರಿ ಹಾವು 1 ನೇ ಆರೋಪಿಯ ಜಮೀನಿನಲ್ಲಿ 2 ತಿಂಗಳ ಹಿಂದೆ ಸಿಕ್ಕಿರುವುದಾಗಿ ಹೇಳಿದ್ದು, ಅದನ್ನು ಮಾರಾಟ ಮಾಡಲು ಗಿರಾಕಿಗಳಿಗಾಗಿ ಕಾಯುತ್ತಿದಾಗ, ಆರೋಪಿತರು ಸಿಕ್ಕಿಬಿದ್ದಿದ್ದು, ಅದು ವನ್ಯ ಜೀವಿ ಆಗಿರುವುದರಿಂದ ಅದನ್ನು ಅಕ್ರಮವಾಗಿ ವಶದಲ್ಲಿ ಇಟ್ಟುಕೊಳ್ಳುವುದು ಕಾನೂನಿಗೆ ವಿರುದ್ಧವಾಗಿರುವುದರಿಂದ ಆರೋಪಿತರ ವಿರುದ್ಧ ಕ್ರಮ ಜರುಗಿಸಿರುವುದಾಗಿ ಸ್ಪಷ್ಟವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿತರ ಪರ ವಕೀಲರು ಚಾ.ಸಾ.9 ಮತ್ತು 10 ರವರು ಹೇಗೆ ಪರಿಚಯ ಅವರನ್ನು ಹೇಗೆ ಕರೆಸಿದಿರಿ ಹಾಗೂ ಹೇಗೆ ಸಂಪರ್ಕಿಸಿದಿರಿ ಎಂದು ಹೆಚ್ಚಿನ ಪ್ರಶ್ನೆಗಳನ್ನು ಕೇಳಿದ್ದು ಅದಕ್ಕೆ ಈ ಸಾಕ್ಷಿಯು ಅವರಿಗೆ ಮೊಬೈಲ್ ಮೂಲಕ ವಿಚಾರ ತಿಳಿಸಿ ನಂತರ ನೊಟೀಸ್ ಜಾರಿ ಮಾಡಿ ಚಾ.ಸಾ.9 ಮತ್ತು 10 ರವರು ಪಂಚರಾಗಿ ಒಪ್ಪಿಕೊಂಡ ಮೇರೆಗೆ ಅವರನ್ನು ಮಾಹಿತಿ ಇದ್ದ ಸ್ಥಳಕ್ಕೆ ಬರಲು ಹೇಳಿ ಅವರ ಸಮಕ್ಷಮದಲ್ಲಿ ಆರೋಪಿತರನ್ನು ವನ್ಯ ಜೀವಿಯಾದ ಮಣ್ಣು ಮುಕ್ಕ ಹಾವಿನ ಸಮೇತ ಹಿಡಿದು ವಶಕ್ಕೆ ಪಡೆದಿರುವುದಾಗಿ ಸ್ಪಷ್ಟವಾಗಿ ಸಾಕ್ಷ ನುಡಿದಿದ್ದು, ಆ ದಿನ ಪಂಚರಾದ ಚಾ.ಸಾ.9 ಮತ್ತು 10, ಅರಣ್ಯ ಇಲಾಖೆ ಸಿಬ್ಬಂದಿ

ಹೋಗಿಲ್ಲ ಎಂಬುದನ್ನು ಮತ್ತು ಆರೋಪಿತರನ್ನು ಹಿಡಿದಿರುವುದಿಲ್ಲ ಎಂಬುದನ್ನು ನಂಬದಿರಲು ಯಾವುದೇ ವ್ಯತಿರಿಕ್ತವಾದ ಹೇಳಿಕೆಗಳನ್ನು ಪಡೆದುಕೊಂಡಿ ರುವುದಿಲ್ಲ.

29. ಇನ್ನು ಉಳಿದಂತೆ ಪ್ರಾ.ಸಾ.2 ಇವರು ಚಾ.ಸಾ.1 ರವರಿಗೆ ಆ ದಿನ ದಾಳಿ ಮಾಡಿದ ಸಮಯದಲ್ಲಿ ಹಾಜರು ಇದ್ದ ಬಗ್ಗೆ ಹಾಗೂ ಚಾ.ಸಾ.9 ಮತ್ತು 10 ರವರ ಸಮಕ್ಷಮ ಆರೋಪಿತರನ್ನು, ವನ್ಯ ಜೀವಿಯಾದ ಮಣ್ಣು ಮುಕ್ಕ ಹಾವಿನ ಸಮೇತ ಹಿಡಿದು ಪಂಚನಾಮೆ ಬರೆದು ಛಾಯಾಚಿತ್ರ ತೆಗೆದು ವಶಪಡಿಸಿಕೊಂಡ ಬಗ್ಗೆ ಸ್ಪಷ್ಟವಾಗಿ ಸಾಕ್ಷ್ಯ ನುಡಿದಿದ್ದು, ಇವರ ಸಾಕ್ಷ್ಯವು ಫಿರ್ಯಾದುದಾರರಾದ ಚಾ.ಸಾ.1 ರವರ ಸಾಕ್ಷ್ಯಕ್ಕೆ ಅನುಗುಣವಾಗಿರುತ್ತದೆ.

30. ಈ ಪ್ರಕರಣದಲ್ಲಿ ಬಹು ಮುಖ್ಯ ಸಾಕ್ಷಿದಾರರಾದ ಪಂಚರಲ್ಲಿ ಒಬ್ಬರಾದ ಚಾ.ಸಾ.9 ಚರಣ್ ಕುಮಾರ್ ಜೆ.ಆರ್. ರವರನ್ನು ಪ್ರಾ.ಸಾ.3 ಎಂದು ವಿಚಾರಣೆಗೆ ಒಳಪಡಿಸಿದ್ದು, ಇವರು ಚಾ.ಸಾ.1 ರವರು ಫೋನ್ ಮೂಲಕ ತನಗೆ ಮಾಹಿತಿ ತಿಳಿಸಿದ ಬಗ್ಗೆ ಹಾಗೂ ಕೃತ್ಯ ನಡೆದ ಸ್ಥಳದ ಹತ್ತಿರದ ಸ್ಥಳವಾದ ಎ ಐ ಟಿ ವೃತ್ತದ ಬಳಿ ಬರುವಂತೆ ತಿಳಿಸಿದ ಬಗ್ಗೆ ಅದರಂತೆ ತಾನು ಮತ್ತು ಚಾ.ಸಾ.10 ರವರು ಎ ಐ ಟಿ ವೃತ್ತದ ಬಳಿ ಹೋಗಿ ಕಾಯುತ್ತಿದ್ದೆವು, ನಂತರ ಚಾ.ಸಾ.1 ಮತ್ತು ಅವರ ಸಿಬ್ಬಂಧಿಯವರು ಬಂದಿದ್ದು, ತಮಗೆ ಪಂಚರಾಗುವಂತೆ ನೋಟೀಸ್ ಜಾರಿ ಮಾಡಿದ್ದು, ಅದಕ್ಕೆ ತಾವು ಸಹಿ ಮಾಡಿದ್ದು, ನಂತರ ಅವರನ್ನು ಲಕ್ಷ್ಮೀಪುರದ ಲಕ್ಯಾ ಕ್ರಾಸ್ ಬಳಿಗೆ ಕರೆದುಕೊಂಡು ಹೋದ ಬಗ್ಗೆ ಮತ್ತು ಸ್ಥಳದಲ್ಲಿದ್ದ ಇಬ್ಬರು ಆರೋಪಿತರು ಪ್ಲಾಸ್ಟಿಕ್ ಚೀಲದಲ್ಲಿ ಏನೋ ಹಾಕಿ ಇಟ್ಟುಕೊಂಡಿದ್ದು, ತಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದಾಗ ಅವರನ್ನು ಅರಣ್ಯ ಇಲಾಖೆ ಸಿಬ್ಬಂದಿಯವರು ಹಿಡಿದ ಬಗ್ಗೆ ಮತ್ತು ಸದರಿ ಚೀಲವನ್ನು ಬಿಚ್ಚಿ ಪರೀಕ್ಷಿಸಿ ನೋಡಿದಾಗ ಮಣ್ಣು ಮುಕ್ಕ ಹಾವು ಇರುವುದಾಗಿ, ಅದನ್ನು ಆರೋಪಿತರು

ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿದ ಬಗ್ಗೆ ಹಾಗೂ ಹಾವನ್ನು ಅಳತೆ ಮಾಡಿ ಅವರ ಸಮಕ್ಷಮ ಮಹಜರ್ ಬರೆದು ವಶಕ್ಕೆ ಪಡೆದ ಬಗ್ಗೆ ಮತ್ತು ಆ ಸಮಯದಲ್ಲಿ ಛಾಯಾಚಿತ್ರ ತೆಗೆದ ಬಗ್ಗೆ ಸ್ಪಷ್ಟವಾಗಿ ಸಾಕ್ಷ್ಯ ನುಡಿದಿರುತ್ತಾರೆ.

31. ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಈ ಪ್ರಕರಣವನ್ನು ಹೊರತುಪಡಿಸಿ ಸಿ.ಸಿ.ನಂ.1722/2022 ರಲ್ಲಿಯೂ ಕೂಡಾ ತಾನು ಮತ್ತು ಚಾ.ಸಾ.10 ರವರು ಪಂಚ ಸಾಕ್ಷಿದಾರರಾಗಿರುವುದು ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಹಾಗೂ ಇವರು ಎ ಐ ಟಿ ವೃತ್ತದ ಬಳಿ ಹೋದ ಬಗ್ಗೆ ಹಾಗೂ ಇಲಾಖಾ ಜೀಪಿನಲ್ಲಿ 6 ಜನರು ಇದ್ದು, ತಮ್ಮನ್ನು ಸೇರಿಸಿ 8 ಜನ ಆಗಿದ್ದು, ಒಬ್ಬರು ಮಹಿಳಾ ಸಿಬ್ಬಂಧಿ ಇದ್ದು, ಜೀಪಿನಲ್ಲಿ 8 ಜನ ಕೂರಲು ಆಗುವುದಿಲ್ಲ ಎಂಬುದನ್ನು ಅಲ್ಲಗಳೆದಿರುತ್ತಾರೆ. ಹಾಗೂ ಉಳಿದಂತೆ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ನಿಲುವಿಗೆ ಬದ್ದರಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇವರು ಸ್ವತಂತ್ರ ಪಂಚರಾಗಿದ್ದು ಅವರ ಸಾಕ್ಷ್ಯವನ್ನು ನಂಬದಿರಲು ಯಾವುದೇ ಕಾರಣಗಳು ಇರುವುದಿಲ್ಲ. ಹಾಗೂ ಈ ಸಾಕ್ಷಿಯು ಮತ್ತೊಂದು ಪ್ರಕರಣದಲ್ಲಿಯೂ ಕೂಡಾ ಪಂಚ ಸಾಕ್ಷಿಯಾಗಿದ್ದು, ಈ ಪ್ರಕರಣಕ್ಕೆ ಪಂಚ ಸಾಕ್ಷಿ ಆಗಿದ್ದಾರೆ ಎಂಬುದೊಂದೆ ಕಾರಣಕ್ಕೆ ಇವರ ಸಾಕ್ಷ್ಯವನ್ನು ನಂಬದಿರಲು ಸಾಧ್ಯವಿಲ್ಲ. ಹಾಗೂ ಸ್ವತಂತ್ರ ಸಾಕ್ಷಿದಾರರಾದ ಇವರು ಹೇಗೆ ಪರಿಚಯ ಇಲ್ಲದ 1 ಮತ್ತು 2 ನೇ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಾರೆ ಹಾಗೂ ಅವರನ್ನು ಸುಳ್ಳು ಸಾಕ್ಷ್ಯ ಹೇಳಿ ಈ ಪ್ರಕರಣದಲ್ಲಿ ಸಿಕ್ಕಿಸಿ ಹಾಕುವ ಕಾರಣವಾದರು ಏನು ಇದೆ ಎಂಬ ಬಗ್ಗೆ ಆರೋಪಿತರು ಸಂದೇಹ ಪಡುವಂತಹ ಯಾವುದೇ ಸಾಕ್ಷ್ಯವನ್ನು ನ್ಯಾಯಾಲಯದ ಮುಂದೆ ತಂದಿರುವುದಿಲ್ಲ.

32. ಉಳಿದಂತೆ ಪ್ರಾ.ಸಾ.4 ರವರು ದಿನಾಂಕ 14/04/2022 ರಂದು ನ್ಯಾಯಾಲಯದ ಆದೇಶದ ಮೇರೆಗೆ ವಶಪಡಿಸಿಕೊಂಡಿದ್ದ ಹಾವನ್ನು ನಿಪಿ.6 ಪಂಚನಾಮೆ ಮಾಡಿ ಛಾಯಾಚಿತ್ರ ಮತ್ತು ವಿಡಿಯೋ ಚಿತ್ರೀಕರಿಸಿ ಮಣ್ಣು ಮುಕ್ಕ ಹಾವನ್ನು ಸುರಕ್ಷಿತವಾಗಿ ಅರಣ್ಯದಲ್ಲಿ ಬಿಟ್ಟ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ.

33. ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲಿನಲ್ಲಿ ಸದರಿ ಹಾವನ್ನು ಪಡೆದುಕೊಳ್ಳುವ ಸಮಯದಲ್ಲಿ ಅದು ಎಷ್ಟು ವಯಸ್ಸಿನದ್ದು, ಹಾಗೂ ಯಾವ ಲಿಂಗಕ್ಕೆ ಸಂಬಂಧಿಸಿದ್ದು ಎನ್ನುವುದರ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿರುತ್ತೀರಾ ಎಂದು ಪ್ರಶ್ನಿಸಿದ್ದು ಸಾಕ್ಷಿಯು ಇಲ್ಲ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಅದರ ವಯಸ್ಸು ಮತ್ತು ಲಿಂಗ ತಿಳಿದುಕೊಳ್ಳುವ ಅವಶ್ಯಕತೆ ಏನು ಇದೆ ಎಂಬುದು ತಿಳಿದು ಬಂದಿರುವುದಿಲ್ಲ. ಏಕೆಂದರೆ ಆರೋಪಿತರಿಂದ ವಶಪಡಿಸಿಕೊಂಡ ಹಾವೇ ಬೇರೆ ಹಾಗೂ ಪ್ರಾ.ಸಾ.4 ರವರಿಗೆ ಬಿಡಲು ಕೊಟ್ಟ ಹಾವೇ ಬೇರೆ ಎಂಬುದು ಆರೋಪಿತರ ಪ್ರತಿರಕ್ಷೆ ಆಗಿರುವುದಿಲ್ಲ. ಅವರ ಪ್ರತಿರಕ್ಷೆ ಏನೆಂದರೆ ಆರೋಪಿತರು ಹಾವನ್ನು ತಮ್ಮ ವಶದಲ್ಲಿ ಇಟ್ಟುಕೊಂಡಿರುವುದಿಲ್ಲ ಎಂಬುದಾಗಿರುತ್ತದೆ.

34. ಉಳಿದಂತೆ ಪ್ರಾ.ಸಾ.5 ರವರು ಕೂಡಾ ಸದರಿ ವಶಪಡಿಸಿಕೊಂಡ ವನ್ಯಜೀವಿ ಮಣ್ಣು ಮುಕ್ಕ ಹಾವನ್ನು ಪಶು ವೈದ್ಯಾಧಿಕಾರಿಗಳ ಆದೇಶದಂತೆ 2 ದಿನಗಳ ಕಾಲ ಪರಿವೀಕ್ಷಣೆಯಲ್ಲಿಟ್ಟಿದ್ದು, ಸದರಿ ಹಾವು ಆರೋಗ್ಯವಾಗಿದೆ ಎಂಬುದನ್ನು ದೃಢೀಕರಿಸಿಕೊಂಡು ಕಾಡಿನೊಳಗೆ ಬಿಟ್ಟ ಬಗ್ಗೆ ಮತ್ತು ಆ ಸಮಯದಲ್ಲಿ ಫೋಟೋ ಮತ್ತು ವಿಡಿಯೋ ಚಿತ್ರಿಕರಿಸಿ ಅದನ್ನು ಸಿ ಡಿ ಗೆ ವರ್ಗಾಯಿಸಿದಕ್ಕೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ಪ್ರಮಾಣ ಪತ್ರವನ್ನು ನೀಡಿದ ಬಗ್ಗೆ ಸ್ಪಷ್ಟವಾಗಿ ನುಡಿದಿದ್ದು, ಇವರು ತಮ್ಮ ಪಾಟೀ ಸವಾಲಿನಲ್ಲಿ ವಿಡಿಯೋ ಮತ್ತು ಫೋಟೋ ತೆಗೆದ ಮೊಬೈಲಿನ

ಸಂಗ್ರಹ ಸಾಮರ್ಥ್ಯ ಎಷ್ಟು ಇತ್ತು ಎಂಬುದರ ಬಗ್ಗೆ ಹಾಗೂ ಮೊಬೈಲ್ ನಿಂದ ಕಂಪ್ಯೂಟರ್ ಗೆ ಮತ್ತು ಕಂಪ್ಯೂಟರ್ ನಿಂದ ಸಿ ಡಿ ಗೆ ಫೋಟೋ ಮತ್ತು ವಿಡಿಯೋ ಚಿತ್ರೀಕರಣವನ್ನು ವರ್ಗಾಯಿಸಿದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಅವರು ಆ ಬಗ್ಗೆ ದಾಖಲೆ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಆವರು ನೀಡಿರುವ ಪ್ರಮಾಣ ಪತ್ರ ಕಾನೂನಿಗೆ ಪೂರಕವಾಗಿದ್ದು, ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಡಿಯಲ್ಲಿ ಯಾವುದೇ ವ್ಯಕ್ತಿ ಮೊಬೈಲ್ ನಿಂದ ಕಂಪ್ಯೂಟರ್ ಮತ್ತು ಕಂಪ್ಯೂಟರ್ ನಿಂದ ಸಿ.ಡಿ. ಗೆ ಫೋಟೋ ಮತ್ತು ವೀಡಿಯೋ ವರ್ಗಾಯಿಸಿ ಸಿಡಿ ಯನ್ನು ಹಾಜರುಪಡಿಸಿರು ವುದಾಗಿ ಅವರಿಗೆ ತರಬೇತಿ ಆಗಿರಬೇಕು ಎಂಬ ಬಗ್ಗೆ ಯಾವುದೇ ಷರತ್ತು ಇರುವುದಿಲ್ಲ. ಆದುದರಿಂದ ಈ ಸಾಕ್ಷಿಯ ಬಾಯಿಯಿಂದ ಕೂಡಾ ಯಾವುದೇ ವ್ಯತಿರಿಕ್ತವಾದ ಹೇಳಿಕೆಗಳನ್ನು ಹೊರಗೆಡವಿರುವುದಿಲ್ಲ.

35. ಉಳಿದಂತೆ ಪ್ರಾ.ಸಾ.6 ಇವರು ಚಾ.ಸಾ.1 ರವರ ಆದೇಶದ ಮೇರೆಗೆ ದಿನಾಂಕ 13/04/2022 ರಂದು ಆರೋಪಿತರ ಸ್ವಇಚ್ಛಾ ಹೇಳಿಕೆಗಳನ್ನು ದಾಖಲಿಸಿಕೊಂಡ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ.

36. ಉಳಿದಂತೆ ಹಾವನ್ನು ಪರೀಕ್ಷಿಸಿದ ಪಶು ವೈದ್ಯಾಧಿಕಾರಿಯಾದ ಡಾ.ಯಶಸ್ ರವರನ್ನು ಪ್ರಾ.ಸಾ.7 ಎಂದು ಸಾಕ್ಷ್ಯ ಮಾಡಿಸಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ ತನ್ನ ಮುಂದೆ ದಿನಾಂಕ 13/041/2022 ರಂದು ಚಾ.ಸಾ.1 ರವರು ರೆಡ್ ಸ್ಯಾಂಡ್ ಹಾವನ್ನು ಅಂದರೆ ಮಣ್ಣು ಮುಕ್ಕ ಹಾವನ್ನು ಹಾಜರುಪಡಿಸಿದ್ದು, ಅದರ ಆರೋಗ್ಯ ಸ್ಥಿತಿ ಮತ್ತು ವೈಜ್ಞಾನಿಕ ಹೆಸರಿನ ಬಗ್ಗೆ ಮತ್ತು ಅದರ ಉದ್ದಳತೆಯ ಬಗ್ಗೆ ತಾನು ವರದಿ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಮತ್ತು ತಮ್ಮ ಪಾಟೀ ಸವಾಲಿನಲ್ಲಿ ಅದೊಂದು ಪೂರ್ತಿ ಬೆಳವಣಿಗೆ ಆಗಿರುವ ರೆಡ್ ಸ್ಯಾಂಡ್ ಜಾತಿಯ ಹಾವು ಎಂದು ಸ್ಪಷ್ಟವಾಗಿ ಸಾಕ್ಷ್ಯ ನುಡಿದಿರುತ್ತಾರೆ.

37. ಇನ್ನು ಉಳಿದಂತೆ ನಿಪಿ.1 ಮಹಜರ್ ಆಗಿದ್ದು, ಅದರಲ್ಲಿ ಚಾ.ಸಾ.1 ಮತ್ತು 9 ರವರು ಸಹಿ ಮಾಡಿರುವುದಾಗಿ ಗುರುತಿಸಿದ್ದು, ಅದರಲ್ಲಿರುವ ವಿಷಯಗಳು ಗೊತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಹಾಗೂ ಬಹು ಮುಖ್ಯವಾಗಿ ನಿಪಿ.2 ಪಂಚನಾಮೆ ಸಮಯದಲ್ಲಿ ತೆಗೆದ ಛಾಯಾಚಿತ್ರಗಳಲ್ಲಿ ಮಣ್ಣು ಮುಕ್ಕ ಹಾವನ್ನು ಮತ್ತು ಒಂದು ಚೀಲ, ಆರೋಪಿತರು, ಪಂಚರು ಹಾಗೂ ಸಿಬ್ಬಂದಿಗಳು ಇರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ನಿಪಿ.6 ಹಾವನ್ನು ಅರಣ್ಯಕ್ಕೆ ಜೀವಂತವಾಗಿ ಬಿಟ್ಟು ಬಂದ ಮಹಜರ್ ಆಗಿರುತ್ತದೆ.

38. ಈ ಎಲ್ಲಾ ಸಾಕ್ಷಿದಾರರ ಸಾಕ್ಷಾಧಾರಗಳಿಂದ ದಿನಾಂಕ 13/02/2022 ರಂದು 1 ಮತ್ತು 2 ನೇ ಆರೋಪಿತರು ಕಾನೂನಿಗೆ ವಿರುದ್ಧವಾಗಿ ವನ್ಯ ಜೀವಿಯಾದ ಮಣ್ಣು ಮುಕ್ಕ ಹಾವನ್ನು ತಮ್ಮ ವಶದಲ್ಲಿ ಇಟ್ಟುಕೊಳ್ಳಬಾರದು ಎಂಬ ಕಾನೂನು ಇದ್ದರೂ ಕೂಡಾ ಅದನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರುವುದು ಸ್ಪಷ್ಟವಾಗಿ ರುಜುವಾತು ಆಗಿರುತ್ತದೆ. ಹಾಗೂ ಅರಣ್ಯ ಇಲಾಖೆಯ ಸಿಬ್ಬಂಧಿಗಳು ಕೇವಲ ಇಲಾಖಾ ಸಿಬ್ಬಂಧಿಗಳು ಆದ ಮಾತ್ರಕ್ಕೆ ಅವರ ಸಾಕ್ಷ್ಯವನ್ನು ನಂಬಬಾರದು ಎಂದು ಹೇಳಲು ಬರುವುದಿಲ್ಲ. ಹಾಗೂ ಅವರು ಆಸಕ್ತಿಯುಳ್ಳ ಸಾಕ್ಷಿದಾರರು ಆಗಿರುತ್ತಾರೆ ಎಂಬುದನ್ನು ಕೂಡಾ ಪಾಟೀ ಸವಾಲಿನಲ್ಲಿ ಎಲ್ಲಿಯೂ ಸೂಚಿಸಿರುವುದಿಲ್ಲ. 1 ಮತ್ತು 2 ನೇ ಆರೋಪಿತರನ್ನು ಈ ಪ್ರಕರಣದಲ್ಲಿ ಸಿಲುಕಿಸಿರುವ ಬಗ್ಗೆ ಕೂಡಾ ಎಲ್ಲಿಯೂ ಕಂಡು ಬರುವುದಿಲ್ಲ ಮತ್ತು ಅದನ್ನು ಸ್ಪಷ್ಟಪಡಿಸಿರುವುದಿಲ್ಲ. ಇನ್ನು ಮುಖ್ಯವಾಗಿ ಸ್ವತಂತ್ರ ಸಾಕ್ಷಿದಾರರಾದ ಚಾ.ಸಾ.9 ರವರು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿದ್ದು, 1 ಮತ್ತು 2 ನೇ ಆರೋಪಿತರು ತಮ್ಮ ವಶದಲ್ಲಿ ವನ್ಯ ಜೀವಿಯಾದ ಮಣ್ಣು ಮುಕ್ಕ ಹಾವನ್ನು ಇಟ್ಟುಕೊಂಡಿರುವ ಬಗ್ಗೆ ಸ್ಪಷ್ಟವಾಗಿ ಸಾಕ್ಷ್ಯ ನುಡಿದಿರುತ್ತಾರೆ.

39. ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಆರೋಪಿತರು ದಿನಾಂಕಃ 13-04-2022 ರಂದು ಲಕ್ಷ್ಮೀಪುರ ಗ್ರಾಮದ, ಲಕ್ಯಾ ತಿರುವಿನ ಬಳಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಒಂದು ಮಣ್ಣು ಮುಕ್ಕ ಹಾವನ್ನು (Red Sand boa) ಹಿಡಿದುಕೊಂಡು ನಿಂತಿದ್ದು, ಮತ್ತು ಸದರಿ ಹಾವು 1 ನೇ ಆರೋಪಿಯ ಹೊಲದಲ್ಲಿ ಸಿಕ್ಕಿದ್ದು, ಅದನ್ನು ಗಿರಾಕಿಗಳಿಗೆ ಮಾರಾಟ ಮಾಡಲು ಪ್ರಯತ್ನಿಸಿದ್ದರು ಎಂದು ಹೊರಿಸಲಾದ ಆರೋಪಗಳನ್ನು ಅಭಿಯೋಜನೆಯವರು ಪೂರಕವಾದ ಸಾಕ್ಷ್ಯಾಧಾರಗಳೊಂದಿಗೆ ರುಜುವಾತುಪಡಿಸಿರುವುದು ಕಂಡುಬರುತ್ತದೆ. ಆದಕಾರಣ ಅಂಶ ಸಂಖ್ಯೆ 1 ನ್ನು ಸಕಾರಾತ್ಮಕವೆಂದು ಉತ್ತರಿಸಿದ್ದೇನೆ.

40. ಅಂಶ-2 ಃ- ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಿರುತ್ತೇನೆ.

## ಆ ದೇ ಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(2)ರ ಅಡಿಯಲ್ಲಿ ಕಾರ್ಯೋನ್ಮುಖಿಳಾಗಿ, ಆರೋಪಿತರ ವಿರುದ್ಧ ಹೊರಿಸಿದ ವನ್ಯ ಜೀವಿ (ಸಂರಕ್ಷಣಾ) ಕಾಯ್ದೆ 1972 ಸದರಿ ಕಾಯ್ದೆಯ ಕಲಂ 51 ರ ಅಡಿಯಲ್ಲಿನ ಆರೋಪವು ಸಾಭೀತಾದ ಕಾರಣ 1 ಮತ್ತು 2 ನೇ ಆರೋಪಿತರನ್ನು ಸಿದ್ದದೋಷಿಗಳು ಎಂದು ನಿರ್ಣಯಿಸಲಾಗಿದೆ.

1 ಮತ್ತು 2 ನೇ ಆರೋಪಿತರನ್ನು ಶಿಕ್ಷೆಯ ಬಗ್ಗೆ ಕೇಳಿದ ನಂತರ ಮುಂದಿನ ಆದೇಶ ಮಾಡಲಾಗುವುದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ: 22 ನೇ ನವೆಂಬರ್ 2025 ರಂದು ನಾನು ಉದ್ಘೋಷಿಸಿದ್ದೇನೆ.)

H T ANURADHA

Digitally signed by H T ANURADHA
Date: 2025.12.04 12:56:27 +0530

-ಸಹಿ -
(ಅನುರಾಧ ಹೆಚ್.ಟಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಚಿಕ್ಕಮಗಳೂರು.

## ಶಿಕ್ಷೆಯ ಪ್ರಮಾಣದ ಕುರಿತು ಆದೇಶ

ಸಹಾಯಕ ಸರ್ಕಾರಿ ಅಭಿಯೋಜಕರು ತಮ್ಮ ವಾದವನ್ನು ಮಂಡಿಸುತ್ತಾ, 1 ಮತ್ತು 2 ನೇ ಆರೋಪಿತರು ವನ್ಯ ಜೀವಿ (ಸಂರಕ್ಷಣಾ) ಕಾಯ್ದೆ 1972 ರ ಕಲಂ 51 ರ ಅಡಿಯಲ್ಲಿ ಮಾಡಲಾದ ಆರೋಪಗಳು ಸಾಭೀತಾದ ಹಿನ್ನೆಲೆಯಲ್ಲಿ ಸೆರೆಮನೆ ವಾಸ ಹಾಗೂ ದಂಡವನ್ನು ವಿಧಿಸಬಹುದಾಗಿದೆ. ಮೇಲ್ಕಂಡ ಕಾರಣಗಳಿಂದ ಹಾಗೂ ಸಮಾಜದ ಹಿತದೃಷ್ಟಿಯಿಂದ ಆರೋಪಿತರಿಗೆ ಹೆಚ್ಚಿನ ಶಿಕ್ಷೆಯನ್ನು ವಿಧಿಸಬೇಕೆಂದು ಕೇಳಿಕೊಂಡಿರುತ್ತಾರೆ.

1 ಮತ್ತು 2 ನೇ ಆರೋಪಿತರು ಮತ್ತು ಆರೋಪಿತರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಆರೋಪಿತರಿಗೆ ಮಕ್ಕಳು ಮತ್ತು ವಯಸ್ಸಾದ ತಂದೆ-ತಾಯಿಗಳು ಇರುತ್ತಾರೆ. ಅವರುಗಳನ್ನು ನೋಡಿಕೊಳ್ಳುವ ಹೆಚ್ಚಿನ ಹೊಣೆಗಾರಿಕೆಯು

ಆರೋಪಿತರ ಮೇಲೆ ಇರುತ್ತದೆ. ಹಾಗಾಗಿ ಆರೋಪಿತರಿಗೆ ನ್ಯಾಯ ಮತ್ತು ಸಮಾತೆಯ ದೃಷ್ಟಿಯಿಂದ ಕಡಿಮೆ ಶಿಕ್ಷೆಯನ್ನು ವಿಧಿಸುವಂತೆ ಪ್ರಾರ್ಥಿಸಿಕೊಂಡಿರುತ್ತಾರೆ.

1 ಮತ್ತು 2 ನೇ ಆರೋಪಿತರ ಹಿನ್ನೆಲೆ ಹಾಗೂ ಅವರು ಎಸಗಿದಂತಹ ಕೃತ್ಯ ಅಪರಾಧದ ಸ್ವರೂಪ ಇವುಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಹಾಗೂ ಸಮಾಜದ ಹಿತದೃಷ್ಟಿಯಿಂದ ಪರಿವೀಕ್ಷಣಾ ಕಾಯ್ದೆ ಅಡಿಯಲ್ಲಿ ಆರೋಪಿತರು ಬಿಡುಗಡೆಗೊಳ್ಳಲು ಅರ್ಹರಾಗಿರುವುದಿಲ್ಲ. ಹಾಗೂ ಈ ಪ್ರಕರಣದಲ್ಲಿ ಆರೋಪಿತರು ವನ್ಯ ಜೀವಿಯಾದ ಮಣ್ಣು ಮುಕ್ಕ ಹಾವನ್ನು ಅಕ್ರಮವಾಗಿ ಸ್ವಾಧೀನದಲ್ಲಿ ಇಟ್ಟುಕೊಂಡಿರುವುದು ರುಜುವಾತು ಆಗಿರುತ್ತದೆ ಆದರೆ ಈ ಹಿಂದೆ ಇದೇ ರೀತಿಯ ಪ್ರಕರಣದಲ್ಲಿ ಆರೋಪಿತರು ಬಾಗಿಯಾಗಿರುವ ಬಗ್ಗೆ ಅಭಿಯೋಜನೆಯವರು ಯಾವುದೇ ಮಾಹಿತಿ ತಿಳಿಸಿರುವುದಿಲ್ಲ. ಆದುದರಿಂದ ಆರೋಪಿತರನ್ನು ಸೆರೆಮನೆಗೆ ಕಳುಹಿಸುವ ಬದಲಾಗಿ ದಂಡವನ್ನು ವಿಧಿಸುವುದು ಸೂಕ್ತ ಎಂದು ನ್ಯಾಯಾಲಯವು ಅಭಿಪ್ರಾಯಕ್ಕೆ ಬಂದು ಹಾಗೂ ನ್ಯಾಯದಾನದ ದೃಷ್ಟಿಯಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## ಆ ದೇ ಶ

1 ಮತ್ತು 2 ನೇ ಆರೋಪಿತರು ವನ್ಯ ಜೀವಿ (ಸಂರಕ್ಷಣಾ) ಕಾಯ್ದೆ 1972 ರ ಕಲಂ 51 ರ ಅಡಿಯಲ್ಲಿ ಮಾಡಿದ ಅಪರಾಧಕ್ಕಾಗಿ ತಲಾ 5,000/-ರೂಗಳ ದಂಡವನ್ನು ವಿಧಿಸಲಾಗಿದೆ. 1 ಮತ್ತು 2 ನೇ ಆರೋಪಿತರು ದಂಡದ ಹಣವನ್ನು ಪಾವತಿಸಲು ವಿಫಲರಾದರೆ 6 ತಿಂಗಳ ಕಾಲ ಸಾಧಾ ಕಾರಾಗೃಹ ಶಿಕ್ಷೆಯನ್ನು ಅನುಭವಿಸತಕ್ಕದ್ದು.

KACM030026812022



ದಂಡದ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಲು ಆದೇಶಿಸಲಾಗಿದೆ.

1 ಮತ್ತು 2 ನೇ ಆರೋಪಿತರು ನೀಡಿದ ಜಾಮೀನು ಮುಚ್ಚಳಿಕೆ ಪತ್ರವನ್ನು ರದ್ದುಪಡಿಸಲಾಗಿದೆ.

ಆರೋಪಿತರಿಗೆ ತೀರ್ಪಿನ ನಕಲನ್ನು ಉಚಿತವಾಗಿ ನೀಡತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕಃ 22 ನೇ ನವೆಂಬರ್ 2025 ರಂದು ನಾನು ಉದ್ಘೋಷಿಸಿದ್ದೇನೆ.)

-ಸಹಿ -

H T ANURADHA Digitally signed by H T ANURADHA Date: 2025.12.04 12:56:35 +0530

(ಅನುರಾಧ ಹೆಚ್.ಟಿ. )
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಚಿಕ್ಕಮಗಳೂರು.

## ಅ ನು ಬಂ ಧ

ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-

| | | |
|---|---|---|
| ಪ್ರಾಸಾ-1 | ಃ | ಎಲ್.ಎಂ.ಶರತ್ |
| ಪ್ರಾಸಾ-2 | ಃ | ದೇವರಾಜ್ ಹೆಚ್. |
| ಪ್ರಾಸಾ-3 | ಃ | ಚರಣ್ ಕುಮಾರ್ |
| ಪ್ರಾಸಾ-4 | ಃ | ಸ್ವಾತಿ |
| ಪ್ರಾಸಾ-5 | ಃ | ಗೌರೀಶ್ |
| ಪ್ರಾಸಾ-6 | ಃ | ಗಿರೀಶ್ |
| ಪ್ರಾಸಾ-7 | ಃ | ಯಶಸ್ |

ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು ಃ-

| | | |
|---|---|---|
| ನಿ.ಪಿ-1 | ಃ | ಮಹಜರ್ |
| ನಿ.ಪಿ-2 | ಃ | ಛಾಯಾಚಿತ್ರ |
| ನಿ.ಪಿ-3 | ಃ | ಸಿ.ಡಿ. |
| ನಿ.ಪಿ-4 | ಃ | ನೋಟೀಸ್ |
| ನಿ.ಪಿ-5 | ಃ | ನಿವೇದನೆ |
| ನಿ.ಪಿ-6 | ಃ | ಮಹಜರ್ |
| ನಿ.ಪಿ-7 | ಃ | 65 ಬಿ ಪ್ರಮಾಣ ಪತ್ರ |
| ನಿ.ಪಿ-8 | ಃ | ಮನವಿ |
| ನಿ.ಪಿ-9-10 | ಃ | ಆರೋಪಿತರ ಸ್ವಇಚ್ಛಾ ಹೇಳಿಕೆ |
| ನಿ.ಪಿ-11-12 | ಃ | ಮನವಿ ಮತ್ತು ವರದಿ |

ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-

- ಇಲ್ಲ -

ಆರೋಪಿತರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು ಃ-

- ಇಲ್ಲ -

ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ಮುದ್ದೆಮಾಲುಗಳು ಃ-

- ಇಲ್ಲ -

- ಸಹಿ -

(ಅನುರಾಧ ಹೆಚ್.ಟಿ. )
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಚಿಕ್ಕಮಗಳೂರು.

H T ANURADHA

Digitally signed by H T ANURADHA
Date: 2025.12.04 12:56:46 +0530